**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ– 8/2023**

| | | |
|---|---|---|
| **ಸಾಕ್ಷಿದಾರನ ಹೆಸರು** | : ದಶರಥ್ | ಪಿ.ಡಬ್ಲ್ಯೂ– 13 |
| **ತಂದೆಯ ಹೆಸರು** | : ಗುರುವ ಬೋವಿ | ಸಿ.ಡಬ್ಲ್ಯೂ– 25 |
| **ವಯಸ್ಸು** | : 60 ವರ್ಷ | |
| **ಉದ್ಯೋಗ** | : ಗಾರೆ ಕೆಲಸ | |
| **ವಾಸಸ್ಥಳ** | : ಬೆಲವತ್ತಾ ಗ್ರಾಮ. | |

**ಸಾಕ್ಷಿಯನ್ನು ಈ ದಿನ ದಿಃ07.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**1.** ವಕೀಲರಾದ ಕುಮಾರವರ ಪರಿಚಯ ಇರುತ್ತದೆ. ಆರೋಪಿತರು ನಮ್ಮ ಊರಿನವರು ನನಗೆ ಪರಿಚಿತರಾಗಿರುತ್ತಾರೆ.

**2.** ಯಾವ ಕಾರಣಕ್ಕೆ ಆರೋಪಿತರ ಮೇಲೆ ಪ್ರಕರಣ ದಾಖಲಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ನಾನು ಯಾವುದೇ ಗಲಾಟೆ ನೋಡಿರುವುದಿಲ್ಲ. ಪೊಲೀಸರು ಪೊಲೀಸ್ ಠಾಣೆಯಲ್ಲಿ ನನ್ನ ಸಹಿಯನ್ನು ಪಡೆದಿರುತ್ತಾರೆ. ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ. ನನಗೆ ಯಾವುದೇ ವಿಡಿಯೋ ತೋರಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

3. ದಿಃ- 19.01.2020 ರಂದು ಬೆಳಿಗ್ಗೆ 11.30 ರ ಸುಮಾರಿಗೆ ನಾನು ಮತ್ತು ಲಾಯರ್ ಕುಮಾರ್ ಅರಳೀಕಟ್ಟೆ ಬಳಿ ಮಾತನಾಡುತ್ತಾ ನಿಂತಿದ್ದೆವು. 11.50 ರ ಸುಮಾರಿಗೆ ಮೇಲಿನಿಂದ ಜೋರಾಗಿ ಒಂದು ಆಟೋ ಮುಂದೆ ಹೋಯಿತು. ಆ ಆಟೋದಲ್ಲಿ ಒಂದು ಮೇಕೆ ಇತರೆ ಆಸಾಮಿಗಳು ಇದ್ದರು. ಅವರ ಹಿಂದೆ 4-5 ಸ್ಕೂಟರಿನಲ್ಲಿ ಹಿಂಬಾಲಿಸಿಕೊಂಡು ಕಳ್ಳಕಳ್ಳ ಎಂದು ಕಿರುಚಿಕೊಂಡು ಹೋಗುತ್ತಿದ್ದರು. ದೂರದಲ್ಲಿ ಕ್ರಾಸಿನಲ್ಲಿ ಜೋರಾಗಿ ಹೋದ ಆಟೋ ಲಕ್ಷ್ಮೀ ಹೋಟೆಲ್ ಕ್ರಾಸಿನಲ್ಲಿ ಪಲ್ಟಿ ಹೊಡೆದು ಬಿದ್ದಿತ್ತು. ನಾನು ಕೂಡ ಅಲ್ಲಿಗೆ ಹೋಗಿ ನೋಡಿದಾಗ, ಒಬ್ಬ ಆಟೋ ಬಳಿ ಕೆಳಗೆ ಬಿದ್ದಿದ್ದ ಒಬ್ಬ ಯುವಕನಿಗೆ ಭರತ್ , ರವಿ, ಗಣೇಶ ಮತ್ತು ಮಹೇಶ್ ರವರು ಸೇರಿ ಮೈಕೈಗೆ ತಲೆಗೆ ಮನಬಂದಂತೆ ಹೊಡೆದು ಹಲ್ಲೆ ಮಾಡಿದರು. ಸುಮಾರು 11.55 ಕ್ಕೆ ಗೋಪಾಲ್ ರವರು ಬಂದು ಮೇಕೆಯನ್ನು ಗುರುತಿಸಿ ಕಳ್ಳತನ ಮಾಡಿಕೊಂಡು ಬಂದಿರುತ್ತಾರೆ ಎಂದು ತಿಳಿಸಿದರು. ಹೊಟ್ಟೆ ಹಿಡಿದುಕೊಂಡು ಸುಸ್ತಾಗಿದವನನ್ನು ಕೇಳಿದಾಗ, ಆತ ಜಹೀರುದ್ದೀನ್ ಎಂದು ತಿಳಿಸಿದ. ನಂತರ ಚಾ.ಸಾಃ21 ಮತ್ತು 22 ರವರು ಚಾ.ಸಾಃ2 ರವರನ್ನು ಹೋಟೆಲ್ ಬಳಿ ವಾಹನದಲ್ಲಿ ಕೂರಿಸಿಕೊಂಡು ಬಂದರು. ಆಗ ಆತನ ಮೇಲೂ ಕೂಡ ಆರೋಪಿತರು ಹಲ್ಲೆ ಮಾಡಿದರು. ನಂತರ ನಾನು 12.15 ಕ್ಕೆ ಮೇಟಗಳ್ಳಿ ಪೊಲೀಸ್ ಠಾಣೆಗೆ ಫೋನ್ ಕರೆ ಮಾಡಿ ಮಾಹಿತಿ ನೀಡಿರುತ್ತೇನೆ. ನಂತರ ಪೊಲೀಸರು ಅಲ್ಲಿಗೆ ಬಂದು ಪರಿಶೀಲನೆ ಮಾಡಿರುತ್ತಾರೆ. ನಾನು ಗೋಪಾಲ್ ರವರ ಮೇಕೆಯನ್ನು ಕಳ್ಳತನ ಮಾಡಿಕೊಂಡು ಹೋಗುತ್ತಿದ್ದವರನ್ನು ಹಿಡಿದು ಊರಿನ ಜನ ಗುಂಪು ಸೇರಿ ಹಲ್ಲೆ

ಮಾಡಿರುತ್ತಾರೆ ಮಾತ್ರ ತಿಳಿಸಿರುತ್ತೇನೆ. ನಂತರ ಇಬ್ಬರು ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಜಹೀರುವುದ್ದೀನ್ ತೀರಿಕೊಂಡನು ಎಂಬ ವಿಚಾರ ತಿಳಿದು ಬಂದಿತು ಎಂದರೆ ಸರಿಯಲ್ಲ.

**4.** ಲಕ್ಷ್ಮೀ ಹೋಟೆಲಿನಲ್ಲಿ ಅಳವಡಿಸಿದ ಸಿಸಿಟಿವಿ ಕ್ಯಾಮೆರಾದಲ್ಲಿನ ದೃಶ್ಯಾವಳಿಗಳನ್ನು ನನಗೆ ತೋರಿಸಿದಾಗ ನಾನು ಹಲ್ಲೆ ಮಾಡಿದವರನ್ನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಇದೇ ರೀತಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಶಾನೆ ಪಿ–18 ಎಂದು ಗುರುತಿಸಲಾಯಿತು.

**5.** ನಾನು ಪ್ರತ್ಯಕ್ಷವಾಗಿ ಘಟನೆ ನೋಡಿ ಎಲ್ಲಾ ವಿಚಾರ ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

<u>ಮರುವಿಚಾರಣೆಃ– ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**